# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 473 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಗರ್ಭಿಣಿ ಮತ್ತು ಶಿಶುಗಳ ಅಪೌಷ್ಠಿಕತೆ ನಿವಾರಣೆ ಸಲುವಾಗಿ ಪೌಷ್ಠಿಕಾಂಶವುಳ್ಳ ಆಹಾರ ನೀಡುವ 'ಮಾತೃಪೂರ್ಣ' ಯೋಜನೆಯಡಿ ತರಕಾರಿ ಖರೀದಿಸಲು ಪ್ರತಿ ಗರ್ಭಿಣಿಗೆ ಕೇವಲ 60 ಪೈಸೆ ನಿಗದಿಪಡಿಸಿರುವ ಸರ್ಕಾರದ ಅವೈಜ್ಞಾನಿಕ ಕ್ರಮದಿಂದ ಯೋಜನೆಯ ಅನುಷ್ಠಾನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾತೃಪೂರ್ಣ ಯೋಜನೆಯಡಿ ತರಕಾರಿ ಖರೀದಿಸಲು ಪ್ರತಿ ಗರ್ಭಿಣಿಗೆ ಲಭ್ಯ ಅನುದಾನದ ಮಿತಿಯೊಳಗೆ 60 ಪೈಸೆ ನಿಗದಿಪಡಿಸಲಾಗಿರುತ್ತದೆ. ಅಂಗನವಾಡಿ ಕೇಂದ್ರವು ಸಮುದಾಯ ಆಧಾರಿತ ಕಾರ್ಯಕ್ರಮವಾಗಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ಪೋಷಣ್ ವಾಟಿಕ ಕಾರ್ಯಕ್ರಮದ ಮೂಲಕ ಸೊಪ್ಪು ತರಕಾರಿ ಬೆಳೆಯಲು ಮತ್ತು ಫಲಾನುಭವಿಗಳು ಸ್ವ-ಇಚ್ಛೆಯಿಂದ ಸೊಪ್ಪು ತರಕಾರಿಗಳನ್ನು ಒದಗಿಸಲು ಪ್ರೋತ್ಸಾಹ ನೀಡಲಾಗಿರುತ್ತದೆ. |
| ಆ. | ಬಂದಿದ್ದಲ್ಲಿ, ತರಕಾರಿ ಖರೀದಿಸಲು ಪ್ರತಿ ಗರ್ಭಿಣಿಗೆ ಕೇವಲ 60 ಪೈಸೆ ನಿಗದಿಪಡಿಸಿರುವ ಈ ಅವೈಜ್ಞಾನಿಕ ಕ್ರಮಕ್ಕೆ ಕಾರಣಗಳೇನು; | ಮಾತೃಪೂರ್ಣ ಯೋಜನೆಯಡಿ ರಾಜ್ಯ ಸರ್ಕಾರದ ಉಪ ಕ್ರಮದಂತೆ ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.11.50 ಗಳಂತೆ ಹೆಚ್ಚುವರಿಯಾಗಿ ಒದಗಿಸುತ್ತಿದ್ದು, ಸದರಿ ಮೊತ್ತದಲ್ಲಿ ರೂ. 6.00 ರಂತೆ ಮೊಟ್ಟೆ, ರೂ. 4.70 ರಂತೆ ಹಾಲಿನ ಪುಡಿ ಮತ್ತು ರೂ. 20 ಪೈಸೆ ಸಕ್ಕರೆ ವೆಚ್ಚ ಭರಿಸುತ್ತಿದ್ದು, ನಿಗದಿಪಡಿಸಿದ ಘಟಕ ವೆಚ್ಚದ ಮಿತಿಯಲ್ಲಿ ಪೂರಕ ಪೌಷ್ಟಿಕ ಆಹಾರ ನಿರ್ವಹಿಸಬೇಕಾದ ಕಾರಣ ಉಳಿದ 60 ಪೈಸೆಯಲ್ಲಿ ತರಕಾರಿ ಖರೀದಿಯನ್ನು ನಿರ್ವಹಿಸಲಾಗುತ್ತಿದೆ. |
| ಇ. | ಪ್ರತಿ ಗರ್ಭಿಣಿಗೆ ತರಕಾರಿ ಖರೀದಿಸಲು ಸೂಕ್ತ ಹಾಗೂ ವಾಸ್ತವವಾಗಿ ಬೇಕಾಗಿರುವ ಮೊತ್ತವನ್ನು ನಿಗದಿಪಡಿಸಿ ಆ ಮೂಲಕ ಅಪೌಷ್ಠಿಕತೆ ಹೋಗಲಾಡಿಸಲು ಕೈಗೊಂಡಿರುವ ಈ ಮಹತ್ವಪೂರ್ಣ ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಇನ್ನು ಮುಂದೆ ಯಾವುದೇ ವ್ಯತ್ಯಯವಾಗದಂತೆ ಸರ್ಕಾರ ಕೂಡಲೇ ಸೂಕ್ತ ಕ್ರಮ ವಹಿಸುವುದೇ? | ಮಾತೃಪೂರ್ಣ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ 600 ಕ್ಯಾಲರಿಸ್ 18-20 ಗ್ರಾಂ ನಿಗದಿಪಡಿಸಿದ್ದು, ಅದಕ್ಕಿಂತ ಹೆಚ್ಚಿನ ಪ್ರಮಾಣದ ಕ್ಯಾಲರೀಸ್ ಮತ್ತು ಪ್ರೋಟೀನ್‌ಯುಕ್ತ ಪೂರಕ ಪೌಷ್ಟಿಕ ಆಹಾರವನ್ನು ಗರ್ಭಿಣಿ ಹಾಗೂ ಬಾಣಂತಿಯರಿಗೆ ಒದಗಿಸಲಾಗುತ್ತಿದ್ದು, ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ಕಬ್ಬಿಣಾಂಶ ಕ್ಯಾಲ್ಸಿಯಂಯುಕ್ತ ಹಾಗೂ ಜಂತುಹುಳು ನಿವಾರಣಾ ಮಾತ್ರೆಗಳನ್ನು ನೀಡುವ ಮೂಲಕ ಅಪೌಷ್ಟಿಕತೆ ಹೋಗಲಾಡಿಸಲು ಸೂಕ್ತ ಕ್ರಮಕೈಗೊಳ್ಳಲಾಗುತ್ತಿದೆ . |

| | | |
|---|---|---|
| | | ಮುಂದುವರೆದು, ಪೂರಕ ಪೌಷ್ಟಿಕ ಆಹಾರವನ್ನು ಬಿಸಿಯೂಟದ ಮೂಲಕ ಅಂಗನವಾಡಿ ಕೇಂದ್ರದಲ್ಲಿಯೇ ಪಡೆಯಲು ಅಥವಾ ಮನೆಗೆ ಆಹಾರ ಧಾನ್ಯಗಳನ್ನು ವಿತರಿಸುವ ಕುರಿತು ಆದ್ಯತೆ ಮೇರೆಗೆ ಫಲಾನುಭವಿಗಳಿಂದಲೇ ಆಯ್ಕೆಯನ್ನು ಪಡೆದು ಮಾತೃಪೂರ್ಣ ಯೋಜನೆಯನ್ನು ಪರಿಣಾಮಕಾರಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿರುವ ಕಾರಣ ಮಾತೃಪೂರ್ಣ ಯೋಜನೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಮಮಇ 135 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.